KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/JS-94A/BOS /Arts(PG) /2022-23 | 1141 Date: 11 OCT 2022

## ಅಧಿಸೂಚನೆ

ವಿಷಯ: ಸ್ನಾತಕೋತ್ತರ ಸಿ.ಬಿ.ಸಿ.ಎಸ್. ಕನ್ನಡ ಎಂ.ಎ. 1 ರಿಂದ 4ನೇ ಸೆಮಿಸ್ಟರ್ ಪರಿಷ್ಕೃತ ಪಠ್ಯಕ್ರಮವನ್ನು 2022–23ನೇ ಸಾಲಿಗೆ ಹಾಗೂ ನಂತರದ ಸಾಲಿಗೆ ಅಳವಡಿಸುವ ಕುರಿತು.

ಉಲ್ಲೇಖ:1. ಅಭ್ಯಾಸಸೂಚಿ ಮಂಡಳಿ ಠರಾವು ಸಂ. 03, ದಿನಾಂಕ 20.082022.
2. ಕಲಾ ನಿಖಾಯ ಕಲಂ ಠರಾವು ಸಂ. 20, ದಿನಾಂಕ 13.09.2022.
3. ವಿದ್ಯಾವಿಷಯಕ ಪರಿಷತ್ ಸಭೆ ನಿರ್ಣಯ ಸಂ. 12. ದಿನಾಂಕ 17.09.2022.
4. ಕುಲಪತಿಗಳ ಆದೇಶ ದಿನಾಂಕ: 11/10/2022

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿಗೆ ಹಾಗೂ ನಂತರದ ಅವಧಿಗೆ ಸ್ನಾತಕೋತ್ತರ ಸಿ.ಬಿ.ಸಿ.ಎಸ್. ಕನ್ನಡ ಎಂ.ಎ. 1 ರಿಂದ 4ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಪರಿಷ್ಕರಿಸಲು ಸ್ನಾತಕೋತ್ತರ ಕನ್ನಡ ಅಭ್ಯಾಸಸೂಚಿ ಮಂಡಳಿ ಮತ್ತು ಕಲಾ ನಿಖಾಯದ ಸಮಿತಿಯು ಮಾಡಿದ ಶಿಫಾರಸ್ಸ ವಿದ್ಯಾವಿಷಯಕ ಪರಿಷತ್ ಸಭೆಯು (ಉಲ್ಲೇಖ–03) ಅನುಮೋದಿಸಿದ್ದು, ಪರಿಷ್ಕೃತ ಪಠ್ಯಕ್ರಮವನ್ನು ಈ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ.

ಮುಂದುವರೆದು, ಸದರ ಮಾಹಿತಿಯನ್ನು ಅಧ್ಯಕ್ಷರು, ಸ್ನಾತಕೋತ್ತರ ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ ಇವರು ವಿದ್ಯಾರ್ಥಿಗಳ ಹಾಗೂ ಸಂಬಂಧಿಸಿದವರ ಗಮನಕ್ಕೆ ತರಲು ವಿಭಾಗದ ಸೂಚನಾ ಫಲಕದಲ್ಲಿ ಲಗತ್ತಿಸಲು ಈ ಮೂಲಕ ತಿಳಿಸಲಾಗಿದೆ.

ಸದರ ಮಾಹಿತಿಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ (Academic Folder) ಪಡೆದುಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವರು

ಗೆ,

1. ಅಧ್ಯಕ್ಷರು, ಸ್ನಾತಕೋತ್ತರ ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ ಇವರ ಮಾಹಿತಿಗಾಗಿ.
2. ಡೀನರು, ಕಲಾ ನಿಖಾಯ, ಸ್ನಾತಕೋತ್ತರ ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ.
3. ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ.

**ಸಾದರಪೂರ್ವಕವಾಗಿ ಪ್ರತಿ:**
1. ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಸಿಸ್ಟಮ್ ವಿಶ್ಲೇಷಕರು (System Analysist), ಗಣಕಯಂತ್ರ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ಅಧೀಕ್ಷಕರು, ಪರೀಕ್ಷಾ ಗೌಪ್ಯ/ಸ್ನಾತಕೋತ್ತರ/ ಪ್ರಶ್ನೆ ಪತ್ರಿಕೆ / ಸಾಮಾನ್ಯ ಆಡಳಿತ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ವಿದ್ಯಾಮಂಡಳ (ಪಿಜಿ / ಪಿಎಚ್‌ಡಿ) ವಿಭಾಗ, ಕ.ವಿ.ವಿ. ಧಾರವಾಡ.
8. The Nodel Officer, UUCMS / E-Governance Cell, K.U.Dharwad.


# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ

## ಪಠ್ಯಕ್ರಮ

# ಎಂ.ಎ. ಕನ್ನಡ

(ಪರಿಷ್ಕೃತ ಪಠ್ಯಕ್ರಮ)



2022-23 (೧ನೇ ಹಾಗೂ ೨ನೇ ಸೆಮಿಸ್ಟರ್) ಮತ್ತು ಆನಂತರದ ಅವಧಿಗಾಗಿ

ಸಿ.ಬಿ.ಸಿ.ಎಸ್. ಪಠ್ಯಕ್ರಮ ಅನ್ವಯ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ

# ಎಂ.ಎ. ಕನ್ನಡ ಪರಿಷ್ಕೃತ ಪಠ್ಯಕ್ರಮ

2022-23 (1ನೇ ಹಾಗೂ 2ನೇ ಸೆಮಿಸ್ಟರ್) ಮತ್ತು ಆನಂತರದ ಅವಧಿಗಾಗಿ
ಸಿ.ಬಿ.ಸಿ.ಎಸ್. ಪಠ್ಯಕ್ರಮ ಅನ್ವಯ

## ೪.೩ : ಕನ್ನಡ ಸಂಶೋಧನೆ ಮತ್ತು ಕಿರು ಪ್ರಬಂಧ ರಚನೆ

ಒಟ್ಟು ಅಂಕಗಳು : ೧೦೦
ತಾತ್ವಿಕತೆ : ೫೦
ಕಿರುಪ್ರಬಂಧಕ್ಕೆ : ೨೫
ಕಿರುಪರೀಕ್ಷೆ : ೧೧+೧೧=೨೨
ಹಾಜರಾತಿ : ೦೩

'ಸಂಶೋಧನೆ' ಇಂದು ಎಲ್ಲ ಕ್ಷೇತ್ರಗಳಲ್ಲಿ ನಡೆಯುತ್ತಿದೆ. ಇದಕ್ಕೆ ಕನ್ನಡ ಸಾಹಿತ್ಯ ಹೊರತಾಗಿಲ್ಲ. ಸಂಸೋಧನೆಯ ಅರ್ಥ, ವ್ಯಾಪ್ತಿ, ಸಂಶೋಧನೆಯಲ್ಲಿಯ ವಿವಿಧ ಪ್ರಕಾರಗಳು, ಸಂಶೋಧನೆಯ ಆಕರಗಳು, ಕ್ಷೇತ್ರಕಾರ್ಯ ಸಂಶೋಧನೆಯ ಬರವಣಿಗೆ, ಮಹಾಪ್ರಬಂಧ ರಚನೆ, ಅಡಿಟಿಪ್ಪಣೆಗಳನ್ನು ಕೊಡುವ ವಿಧಾನ, ಸಾರಲೇಖ ಸಿದ್ಧಪಡಿಸುವಿಕೆ ಮೊದಲಾದ ವಿಷಯಗಳ ಜ್ಞಾನ ಸಂಶೋಧಕರಿಗೆ ಅವಶ್ಯಕ. ಹೀಗಾಗಿ ಸಂಶೋಧನೆಯ ತಾತ್ವಿಕ ಸಂಗತಿಗಳನ್ನು ತಿಳಿಸುವುದರ ಜೊತೆಗೆ ಅವರು ಕಿರುಪ್ರಬಂಧವನ್ನು ರಚಿಸುವ ಮೂಲಕ ಪ್ರಾಯೋಗಿಕ ಜ್ಞಾನದ ತಿಳುವಳಿಕೆಯನ್ನು ಕೊಡುವುದು ಈ ಪತ್ರಿಕೆಯ ಉದ್ದೇಶವಾಗಿದೆ.

**I.** ೧. ಸಂಶೋಧನೆಯ ಅರ್ಥ – ಡಿಸ್ಕವರಿ, ಇನ್‌ವೆನ್‌ಶನ್, ರಿಸರ್ಚ ಇವುಗಳ ಅರ್ಥ ವ್ಯಾಪ್ತಿ ಮತ್ತು ಸಂಬಂಧ. ಸಂಶೋಧಕನ ಅರ್ಹತೆಗಳು, ಲಕ್ಷಣಗಳು ವಿಜ್ಞಾನ, ಸಮಾಜವಿಜ್ಞಾನ ಮತ್ತು ಸಾಹಿತ್ಯಗಳ ಸಂಶೋಧನ ವಿಧಾನಗಳ ಸಂಬಂಧ ಮತ್ತು ವ್ಯತ್ಯಾಸ.

೨. ಸೃಜನಕ್ರಿಯೆ – ಸಂಶೋಧನ ಕ್ರಿಯೆ ಮತ್ತು ವಿಮರ್ಶನ ಕ್ರಿಯೆಗಳ ಸ್ವರೂಪ–ಸಂಬಂಧ ವ್ಯತ್ಯಾಸ. ಊಹೆ, ಸಂಭಾವ್ಯತೆ, ಸತ್ಯಗಳ ಸ್ವರೂಪ. ಸಾಹಿತ್ಯ. ಸಂಶೋಧನೆಯ ಪ್ರಕಾರಗಳು– ಆನ್ವಯಿಕ, ಬಹುಶಿಸ್ತೀಯ, ಸಾಂಸ್ಕೃತಿಕ, ಚಾರಿತ್ರಿಕ, ತೌಲನಿಕ ಸಂಶೋಧನೆ.

೩. ಆಕರ ಸಾಮಗ್ರಿ – ಸ್ವರೂಪ ಮತ್ತು ಪ್ರಮಾಣ ಪ್ರಕಾರಗಳು. ಪ್ರಧಾನ ಆಕರ, ಪೋಷಕ ಆಕರ, ಅನುಷಂಗಿಕ, ಆಕರದ ನೆಲೆಗಳು.

೪. ಸಾಹಿತ್ಯ ಸಂಶೋಧನೆಯ ಕಾರ್ಯವಿಧಾನ– ವಿಷಯದ ಆಯ್ದು ಪಟ್ಟಿಕೆಗಳ ಸಿದ್ಧತೆ, ಸಂದರ್ಶನ ವಿಧಾನ, ಆಕರ ಸಾಮಗ್ರಿ ಸಂಗ್ರಹ, ವರ್ಗೀಕರಣ, ವಿಷಯ ವಿನ್ಯಾಸ, ಪ್ರಕರಣಗಳ ವಿಭಜನೆ, ವಿಶ್ಲೇಷಣೆ, ವ್ಯಾಖ್ಯಾನ, ಅವತರಣಿಕೆ ಬಳಸುವ ವಿಧಾನ, ಅಡಿಟಿಪ್ಪಣಿ ವಿಧಾನ, ಅನುಬಂಧ ಸಿದ್ಧತೆ, ಪರಿವಿಡಿ ಸಿದ್ಧತೆ, ಸಾರಲೇಖ ಸಿದ್ಧತೆ, ಸಂಶೋಧನೆಯ ಭಾಷೆ.

**II. ಕಿರು ಪ್ರಬಂಧ ರಚನೆ :**

ವಿದ್ಯಾರ್ಥಿಗಳು ಕಡ್ಡಾಯವಾಗಿ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ಕೇಂದ್ರಗಳ ಶೈಕ್ಷಣಿಕ ಪ್ರವಾಸ/ಕ್ಷೇತ್ರಕಾರ್ಯ ಅಧ್ಯಯನ/ಸಾಹಿತ್ಯ ಕೃತಿಗಳ ಅಧ್ಯಯನ ಮಾಡಿ ೩೦ ರಿಂದ ೪೦ ಪುಟಗಳವರೆಗೆ ಕಿರುಪ್ರಬಂಧವನ್ನು ರಚಿಸುವದು.

**ಪರಾಮರ್ಶನ ಗ್ರಂಥಗಳು :**


೧. ಸಂಶೋಧನೆ – ಡಾ.ಎಂ. ಚಿದಾನಂದಮೂರ್ತಿ
೨. ಕನ್ನಡ ಸಂಶೋಧನ ಶಾಸ್ತ್ರ – ಡಾ.ಎಂ.ಎಂ. ಕಲಬುರ್ಗಿ
೩. ಸಂಶೋಧನ ವಿಧಾನ – ಪಿ.ವಿ. ಕುಲಕರ್ಣಿ ಹರಿಕೃಷ್ಣ ಭರಣ್ಯ ಹಾಗೂ ಜಿ. ಸದಾಶಿವ.
೪. ಸಾಹಿತ್ಯ ಸಂಶೋಧನ ಮಾರ್ಗ – ಡಾ. ಸಂಗಮೇಶ ಸವದತ್ತಿಮಠ
೫. ಸಂಶೋಧನ ಶಾಸ್ತ್ರ – ಹೊಸ್ಕೆರೆ ಶಿವಸ್ವಾಮಿ
೬. ಅಂತರ್‌ಶಿಸ್ತೀಯ ಸಂಶೋಧನ – 'ಲೋಚನ' ದಶವಾರ್ಷಿಕ ವಿಶೇಷ ಸಂಚಿಕೆ. ವಿಧಿವಿಧಾನ
೭. ಸಂಶೋಧನ ಸ್ವರೂಪ – ಡಾ. ಬಿ.ವ್ಹಿ. ಶಿರೂರ

೮. ಮಹಾಮಾರ್ಗ – (ಡಾ. ಎಂ.ಎಂ. ಕಲಬುರ್ಗಿ ಅಭಿನಂದನ ಗ್ರಂಥ) ಸಂ. ಸದಾನಂದ ಕನವಳ್ಳಿ ಹಾಗೂ ಡಾ. ವೀರಣ್ಣ ರಾಜೂರ

೯. ಸಂಶೋಧನ ರಂಗ – ತಾಳ್ತಜೆ ವಸಂತಕುಮಾರ

೧೦. ಸಂಶೋಧನಾ ಮೀಮಾಂಸೆ – ಡಾ. ರಹಮತ್ ತರೀಕೆರೆ, ಕ.ವಿ.ವಿ., ಹಂಪಿ

೧೧. ಸಂಶೋಧನೆಯ ವೈಧಾನಿಕತೆಗಳು – ಸಂ. ಡಾ. ಅಮರೇಶ್ ನುಗಡೋಣಿ, ಕನ್ನಡ.ವಿ.ವಿ., ಹಂಪಿ

೧೨. ಸಂಶೋಧನೆಯ ತಾತ್ವಿಕ ಆಯಾಮಗಳು – ಡಾ. ಬಿ.ಎಂ. ಪುಟ್ಟಯ್ಯ, ಕನ್ನಡ.ವಿ.ವಿ., ಹಂಪಿ

೧೩. ಸಂಶೋಧನೆಯ ಎರಡು ಹೆಜ್ಜೆಗಳು – ಡಾ.ಎಚ್.ಎಂ. ಮರುಳಸಿದ್ಧಯ್ಯ.